they obey? ಇದೊಂದೇ ಕೇಸಲ್ಲ, 14 ನಂದರ್ಭಗಳಲ್ಲಿ ಹೀಗೆ ಒಂದು ಆರ್ಡರಾಗಿದೆ. ಇನ್ನು 30 ಕೇಸುಗಳು ಬೇರೆ ಇವೆ. Out of 14 cases, 6 are ordinary darkhast and 8 are under Grow More Food Scheme. ಹೆಚ್ಚು ಆಹಾರ ಬೆಳೆಯುವ ಯೋಜನೆ ಪ್ರಕಾರ ಕೊಟ್ಟಿರುವುದಕ್ಕೆ ಸಾಗುವಳಿ ಚೀಟಿಯಲ್ಲಿ ಅಪ್ಪೆಟ್‌ಪ್ರೈಸ್ ಇಷ್ಟು ಎಂದು ಹಾಕಿದೆ. ಅದರ ಮೇಲೆ ವಸೂಲು ಮಾಡಲು ಸರ್ಕಾರಕ್ಕೆ ಅಧಿಕಾರವೇನಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆಯೇ ಈ ವಿಚಾರದಲ್ಲಿ ಸಾಕಾದಷ್ಟು ನಮಜಾಯಿಷಿ ಕೊಟ್ಟಿದೆ. ಜಿ.ಎಂ.ಎಫ್. ಯೋಜನೆ ಪ್ರಕಾರ ಜಮೀನು ಕೊಟ್ಟಿರುವುದು ಸರಿಯಲ್ಲ, ಹಿಂದೆ ಯಾವ ಬೆಲೆ ನಿಗದಿಮಾಡಿರುತ್ತಾರೋ ಅದನ್ನೇ ತೆಗೆದುಕೊಳ್ಳಬೇಕು; ಒಂದುವೇಳೆ ಅಲ್ಲಿದ್ದ ಸ್ಥಳೀಯ ಸರ್ಕಾರಿ ನೌಕರರು ಮತ್ತು ದರಖಾಸ್ತುದಾರರು ಷರೀಕಾಗಿ ಸರ್ಕಾರಕ್ಕೆ ಮೋಸ ಮಾಡುವ ಪರಿಸ್ಥಿತಿಯಿದ್ದರೆ, ಕಡಮೆ ಬೆಲೆ ನಿಗದಿಮಾಡಿದ್ದರೆ ಅಥವಾ ಸರ್ಕಾರದ ಜಮೀನು ಕೊಡಲು ಏನು ಷರತ್ತಿದೆಯೋ ಅದಕ್ಕೆ ವಿರುದ್ಧವಾಗಿ ದರಖಾಸ್ತುದಾರರಿಗೆ ಕೊಟ್ಟಿದ್ದರೆ ಅಂಥ ನಂದರ್ಭದಲ್ಲಿ ಮಾತ್ರ ಅಪ್ಪೆಟ್ ಬೆಲೆಯನ್ನು ಹೆಚ್ಚಿಸಲು ಅಧಿಕಾರಿಗಳಿಗೆ ಹಕ್ಕಿದೆ.

Lands Granted under Grow More Food Scheme (Disposal by ryots before confirmation).

Q.—588. Sri SHIVANANJE GOWDA (Mysore Taluk).—

Will the Government be pleased to state :—

(*a*) whether it has come to their notice that lands given for temporary cultivation under the Grow More Food Scheme have been disposed of even before the said lands were confirmed to saguvalidars;

(*b*) if so, the action taken by them in this respect?

A.—Sri Kadidal MANJAPPA (Minister for Revenue and Public Works).—

(*a*) No. Cases of that kind are very few and in such cases action is being taken to confirm or cancel the grants according to the circumstances of the case.

(*b*) Does not arise in view of answer to (*a*).

ಶ್ರೀ ಶಿವನಂಜೇಗೌಡ.—ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಹಿಂದೆ ಜಮೀನುಗಳನ್ನು ಜನರಿಗೆ ಕೊಟ್ಟರು. ಅವರ ಹೆಸರಿಗೆ ಆ ಜಮೀನುಗಳು ಖಾಯಂ ಆಗುವುದಕ್ಕೆ ಮೊದಲೇ ವಿಕ್ರಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ಶಿವನಂಜೇಗೌಡ.—ಎಷ್ಟು ಅಂಥ ನಂದರ್ಭಗಳು ಗಮನಕ್ಕೆ ಬಂದಿವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಶಿವನಂಜೇಗೌಡ.—ಜಮೀನು ಕೊಡುವ ನಂದರ್ಭದಲ್ಲಿ ಎಲ್ಲಿ ಜಮೀನಿದೆಯೋ ಅಲ್ಲಿಗೆ ಜನರು ಹೋಗುವುದಿಲ್ಲ ಎಂದು ಸರ್ಕಾರದವರು ಹೇಳುವುದು ನಿಜವೆ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿರುವ ಕಡೆಗೆ ಜನರು ಹೋಗುವುದಿಲ್ಲ, ಜನರಿರುವ ಕಡೆಗೆ ಜಮೀನು ಬರುವುದಿಲ್ಲ.

ಶ್ರೀ ಶಿವನಂಜೇಗೌಡ.—ಒಂದು ಸ್ಥಳದಲ್ಲಿರುವ ಜಮೀನನ್ನು ಆ ಸ್ಥಳದವರಿಗೇ ಕೊಡಬೇಕು, ದೂರದಲ್ಲಿರುವವರಿಗೆ ಕೊಡುವುದಿಲ್ಲ ಎಂದು ಅಮಲ್ದಾರರು ಹೇಳುತ್ತಾರೆ. ಹೀಗಿರುವಾಗ ಜಮೀನಿರುವ ಕಡೆಗೆ ಜನ ಹೋಗಬೇಕೆಂದರೆ ಹೇಗೆ?

ಶ್ರೀ ಕಡಿದಾಳ್ ಮಂಜಪ್ಪ.—ಎರಡನ್ನೂ ಗಮನಿಸಿ ಜಮೀನು ಏರೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಆಯಾ ಗ್ರಾಮದಲ್ಲಿ ಜಮೀನಿಲ್ಲದಿರುವವರಿಗೆ ಕೊಟ್ಟು ಇನ್ನೂ ಹೆಚ್ಚಾಗಿ ಜಮೀನು ಉಳಿದರೆ ಬಾಕಿಯವರಿಗೆ ಕೊಡುವುದು ಸೂಕ್ತ.

Land grants in Birur Amritmahal Kaval to hostels.

Q.—591. Sri Y. M. CHANDRASEKHARIAH (Kadur).—

Will the Government be pleased to state :—

(*a*) the extent of amritmahal kaval at Birur in Kadur Taluk and its survey number ;

(*b*) the number of acres surrendered in the said kaval (survey numberwar details to be furnished);

(*c*) the extent of land granted in each survey number to each of the private hostels and the names of those hostels ;

(*d*) the extent of land granted for the hostels in Survey No. 4;

(*e*) the number of hostels in respect of which applications are received for grant of land in the said Survey No. 4 ;

(*f*) the steps taken in this behalf?

A.—**Sri Kadidal MANJAPPA** (Minister for Revenue and Public Works).—

	Survey No.		*Extent* A.	G.
(*a*)	1	...	208	27
	2	...	415	12
	3	...	9	13
	4	...	3,804	35
	5	...	34	31
	6	...	199	26
	Total	...	4,672	24

			Extent A.	G.
(*b*)	1	...	208	27
	2	...	247	23
	3	...	...	
	4	...	2,062	35
	5 and 6	...	...	
	Total	...	2,519	05

(*c*) A total extent of 65 acres of land in Survey No. 4 of Birur has been granted to both the hostels, *viz.*, Sri Veerasaiva Hostel and Kurubara Hostel at 40 acres and 25 acres, respectively.

(*d*) *Vide* reply to (*c*).

(*e*) Four.

(*f*) Out of the four hostels that had applied for grant of land in Survey No. 4 of Birur, two hostels have been granted land as detailed in (*c*) and proposals in respect of grant of land to Sri Viswakarma Hostel and Manjunatha Anathalaya at 20 acres each are under consideration.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬೀರೂರು ಕಾವಲಿನಲ್ಲಿರುವ ಜಮೀನಿನಲ್ಲಿ ಎರಡು ಹಾಸ್ಟಲುಗಳಿಗೆ ಮಾತ್ರ ಕೊಟ್ಟಿದೆಯೆಂದು ಹೇಳಿದ್ದೀರಿ. ಇನ್ನೆರಡು ಹಾಸ್ಟಲುಗಳಿಗೇಕೆ ಕೊಟ್ಟಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ಮಂಜುನಾಥ ಅನಾಥಾಲಯ ಹಾಸ್ಟಲಿಗೆ ಜಮೀನನ್ನು 10 ವರ್ಷದ ಅವಧಿ ಗೇಣಿಗೆ ಕೊಡಲಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವಿಶ್ವಕರ್ಮ ಹಾಸ್ಟಲ್ ಮತ್ತು ಮಂಜುನಾಥ ಅನಾಥಾಲಯ ಹಾಸ್ಟಲ್‌ನವರು ಖಾಯಮ್ಮಾಗಿ ಕೇಳಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಖಾಯಮ್ಮಾಗಿ ಕೊಡುವ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. *Bona fide* Agriculturistsಗೆ ಮಾತ್ರ ಜಮೀನು ಕೊಡತಕ್ಕದ್ದು, absentee landlordsಗೆ ಕೊಡಕೂಡದೆಂದು ಸರ್ಕಾರದವರ ನೀತಿಯಾಗಿದೆ. ಯಾರು ಯಾರು ಸ್ವಂತವಾಗಿ ಸಾಗುವಳಿ ಮಾಡುವುದಿಲ್ಲವೋ ಅವರಿಗೆ ಕೊಡಕೂಡದೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಒಂದು ಹಾಸ್ಟಲಿಗೆ ಕೊಟ್ಟು ಇನ್ನೊಂದು ಹಾಸ್ಟಲಿಗೆ ಕೊಡದೆ ಇರುವುದು ನ್ಯಾಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆಮಾಡುತ್ತಿದ್ದೇವೆಂದು ಹೇಳಿದ್ದೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—4ನೆಯ ನಂಬರಿನಲ್ಲಿ 2,062 ಎಕರೆಗಳನ್ನು ಬಿಟ್ಟುಕೊಟ್ಟಿದೆಯೆಂದು ಹೇಳಿದ್ದೀರಿ. ಆ ಎಲ್ಲಾ ಜಮೀನೂ ಸಾಗುವಳಿಯಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಹಾಸ್ಟಲಿಗೆ ಜಮೀನು ಕೊಡಬೇಕೆಂದು ಎಷ್ಟು ದಿವಸದಿಂದ ಅರ್ಜಿಗಳು ಬರುತ್ತಿವೆ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಹಾಸ್ಟಲಿಗೆ ಇತ್ತೀಚೆಗೆ ಕೊಟ್ಟಂತೆ ನೆನಪು; ಇನ್ನೊಂದು ಹಾಸ್ಟಲಿಗೆ ಕೊಡುವುದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬೀರೂರಿನಲ್ಲಿ ಕೋ-ಆಪರೇಟಿವ್ ಸೊಸೈಟಿಯವರ ಮುಖಾಂತರ ಒಂದು ಕಮಿಟಿ ಮಾಡಿ ಜಮೀನು ಕೊಡಬೇಕೆಂದು ಹೇಳಿದ್ದು ಜ್ಞಾಪಕದಲ್ಲಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಾವಲಿಗೆ ಜಮೀನಿಲ್ಲದವರು ದರಖಾಸ್ತು ಕೊಡಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇರಬೇಕು. ಆ ಪ್ರಶ್ನೆ ನೀವು ಕೇಳಿರಲಿಲ್ಲ. ಹಾಸ್ಟಲಿನ ವಿಚಾರಮಾತ್ರ ಕೇಳಿದ್ದೀರಿ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಸ್ಟಲಿಗೆ ಕೊಡುವುದಕ್ಕೆ ಮುಂಚೆ ಜಮೀನಿಲ್ಲದ ಬಡವರು ದರಖಾಸ್ತು ಹಾಕಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು, ಹಾಸ್ಟಲಿಗೂ ಜಮೀನಿರಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಅಲ್ಲ ಸಾಗುವಳಿಗೆ ಲಾಯಖ್ಖಾಗಿಲ್ಲದಿರುವ ಸಾವಿರಾರು ಎಕರೆಗಳನ್ನು ಕೊಟ್ಟು ಸಾಗುವಳಿಗೆ ಲಾಯಖ್ಖಾದ ಜಮೀನುಗಳನ್ನು ಹಾಗೆಯೇ ಇಟ್ಟುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಕೇವಲ ದನಗಳಿಗೆ ಲಾಯಖ್ಖಾದ ಗುಡ್ಡಗಾಡು ಪ್ರದೇಶಗಳನ್ನು ಸಾಗುವಳಿಗೆ . . .

ಶ್ರೀ ಕಡಿದಾಳ್ ಮಂಜಪ್ಪ.—ದನಗಳಿಗೆ ಲಾಯಖ್ಖಾದ ಜಮೀನುಗಳನ್ನು ದನಗಳಿಗೆ ಕೊಟ್ಟಿದ್ದೇವೆ, ಜನರಿಗೆ ಲಾಯಖ್ಖಾದ ಜಮೀನುಗಳನ್ನು ಜನರಿಗೆ ಕೊಟ್ಟಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಗುಡ್ಡಗಾಡು ಪ್ರದೇಶವನ್ನು ಸಾಗುವಳಿಗೆ ಯಾರೂ ಕೇಳುವುದಿಲ್ಲ; ಅವು ಸಾಗುವಳಿಗೆ ಲಾಯಖ್ಖಾಗಿಲ್ಲ. ಅಂಥ ಪ್ರದೇಶವನ್ನು ಸಾಗುವಳಿಗೆ ಕೊಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕೇಳಿದ್ದರೆ, ಕೊಟ್ಟಿದ್ದೇವೆ.

ಶ್ರೀ ಕೆ. ಹನುಮಂತಯ್ಯ.—ಏನು ಮಾಡೋಣ ಹೇಳಿ.

ಶ್ರೀ ಜಿ. ಪುಟ್ಟಸ್ವಾಮಿ.—ಅಂಥ ನಂದರ್ಭಗಳನ್ನು ಪರಿಶೀಲನೆಮಾಡಿ ವಾಪಸು ತೆಗೆದುಕೊಂಡು ಲಾಯಖ್ಖಾದ ಜಮೀನನ್ನು ಕೊಡಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಸಂಬಂಧಪಟ್ಟ ದರ ಖಾಸ್ತುದಾರರು ಅರ್ಜಿಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

Money collected on Sugarcane supplied to Mandya Factory.

Q.—602. **Sri G. S. BOMMEGOWDA** (Mandya).—

Will the Government be pleased to state:—

(*a*) the amount that has been collected till now at six rupees per ton on the sugarcane supplied to Mandya Sugar Factory;

(*b*) the amount spent till now, out of the money so collected, on improvements, on communication facilities and other development works;

(*c*) whether request has not come from the committee appointed for this purpose stating that the amount that is being given at present is not adequate and more should be allotted?

A.—**Sri Kadidal MANJAPPA** (Minister for Revenue and Public Works).—

(*a*) Rs. 85,01,088 to end of January 1955.

(*b*) Rs. 65,48,575 to end of January 1955.

(*c*) Yes, from the Development Standing Committee.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಯಾವ ಯಾವ ಸಾಲಿನಲ್ಲಿ ಎಷ್ಟೆಷ್ಟು ವಸೂಲಾಗಿದೆಯೆಂದು ತಿಳಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—1952-53ನೆಯ ಇಸವಿಯಿಂದ ಲೆಕ್ಕ ಇದೆ. 1952-53ರಲ್ಲಿ 26 ಲಕ್ಷ ಚಿಲ್ಲರೆ, 1953-54ರಲ್ಲಿ 21 ಲಕ್ಷ ಚಿಲ್ಲರೆ, 1954-55ರಲ್ಲಿ 30 ಲಕ್ಷ ಚಿಲ್ಲರೆ ಹಣ ವಸೂಲಾಗಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಪ್ರತಿವರ್ಷವೂ ಎಷ್ಟು ಸೆಸ್ ಬರಬೇಕೋ ಅಷ್ಟು ಸೆಸ್ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿರಬಹುದೆಂದು ಊಹೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಎಷ್ಟು ಟನ್ ಕಬ್ಬು ಪ್ರತಿವರ್ಷವೂ ಸಕ್ಕರೆ ಕಾರ್ಖಾನೆಯಲ್ಲಿ crush ಆಗಿದೆಯೆಂಬುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಪ್ರತಿವರ್ಷವೂ ಕಬ್ಬು ಬೆಳೆಯುವ ಪ್ರದೇಶದಲ್ಲಿ ಸಂಚಾರ ಸೌಕರ್ಯ, ಗ್ರಾಮಾಭಿವೃದ್ಧಿ, ಆರೋಗ್ಯ ಮುಂತಾದುವುಗಳಿಗೆ ಪ್ರತಿಯೊಂದಕ್ಕೂ ಎಷ್ಟೆಷ್ಟು ಖರ್ಚು ಮಾಡಿದ್ದೀರೆಂಬುದನ್ನಾದರೂ ತಿಳಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಕೊಡುವುದಕ್ಕಾಗುವುದಿಲ್ಲ. ಆಮೇಲೆ ಬೇಕಾದರೆ ಕೊಡುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಸಂಚಾರ ಸೌಕರ್ಯ ವಿನಾ ಮಿಕ್ಕ ಭಾಗಗಳಿಗೆ ಖರ್ಚುಮಾಡದಿರುವುದನ್ನು ಪರಿಶೀಲಿಸಿ ಮುಂದಿನ ಬಾಬಿಗೆ ಎಷ್ಟೆಷ್ಟು ಖರ್ಚುಮಾಡಬೇಕೆಂಬ ಬಗ್ಗೆ ಅಂದಾಜು ತರಿಸಿ ಅದರಂತೆ ಖರ್ಚು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೊಂದು ಡೆವಲಪ್‌ಮೆಂಟ್ ಕಮಿಟಿ ಇದೆ. ಅದಕ್ಕೆ ಬೇಕಾದಷ್ಟು ಹಣವನ್ನು ಸರ್ಕಾರದವರು ಖರ್ಚುಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಡೆವಲಪ್‌ಮೆಂಟ್ ಕಮಿಟಿಯವರು ತಕ್ಕ ಯೋಜನೆ ತಯಾರುಮಾಡಿ ಸರ್ಕಾರದವರಿಗೆ ಕಳುಹಿಸಿಕೊಟ್ಟರೆ ಇರತಕ್ಕ ಹಣವನ್ನು ಖರ್ಚುಮಾಡುವುದಕ್ಕೆ ಅಡ್ಡಿಯಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮೊದಲು ಸೆಸ್ collect ಮಾಡಬೇಕಾದರೆ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕೆಂದು ಹೇಳಿ ಮಾಡಿದ್ದರೋ ಅದರಂತೆ ಸಂಚಾರ ಸೌಕರ್ಯ ವಿನಾ ಬಾಕಿಯವನ್ನು ಮಾಡದೆ ಇದ್ದರೆ ಅವನ್ನೂ ಮಾಡಿಕೊಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ಉದ್ದೇಶಕ್ಕಾಗಿ Sugarcane Cess ಫಂಡನ್ನು ಮಾಡಿದೆಯೋ ಆ ಉದ್ದೇಶಕ್ಕಾಗಿ ಖರ್ಚುಮಾಡುವುದರಲ್ಲಿ ತೊಂದರೆಯಿಲ್ಲ.

Sri S. SRINIVASA IYENGAR.—By whom is this cess collected, Sir?

Sri Kadidal MANJAPPA.—By the factory.

Sri S. SRINIVASA IYENGAR.—From whom, Sir?

Sri Kadidal MANJAPPA.—The factory pays it.

Sri S. SRINIVASA IYENGAR.—When the factory pays the cess, where has it to be spent, Sir?

Sri Kadidal MANJAPPA.—It has to be spent in the area where the sugarcane is grown. The area has been limited.

Sri S. SRINIVASA IYENGAR.—What is the area where the sugarcane is grown?

Sri Kadidal MANJAPPA.—The area has been fixed according to the Government Order passed some years ago.

Sri S. SRINIVASA IYENGAR.—May I know whether the area the Government meant is the area under the Visvesvaraya Canal, Sir?

Sri Kadidal MANJAPPA.—Yes.

Sri S. SRINIVASA IYENGAR.—Has it come to the notice of Government that this amount is not spent in the entire area?

Sri Kadidal MANJAPPA.—The area is limited, as I submitted already.